## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ –14 ಪಿ.ಡಬ್ಲ್ಯೂ -9

| | | |
|---|---|---|
| ಹೆಸರು | ಃ | ಯಾಸ್ಮಿನ |
| ತಂದೆಃಗಂಡ | ಃ | ಶಬ್ಬಿರ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಅಂಬಲಗಾ |

ದಿನಾಂಕಃ11.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 13, 15 ರಿಂದ 22 ರವರ ಪರಿಚಯ ಇರುತ್ತದೆ ಮೃತ ರತ್ನಾಬಾಯಿ ದಾಮು ಹಾಗೂ ಆದಿತ್ಯರವರ ಪರಿಚಯ ಇರುತ್ತದೆ. ಅಂಬಲಗಾ ದಾಲಮಲಿಕ ಗುಡಿಯ ಹತ್ತಿರ ಮೂರು ವರ್ಷದ ಹಿಂದೆ ಇಬ್ಬರು ತೀರಿಕೊಂಡಿರುತ್ತಾರೆ. ನನಗೆ ಕೈಗೆ, ಕಾಲಿಗೆ ಪೆಟ್ಟಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.10.02.2020 ರಂದು ಮದ್ಯಾಹ್ನ 3.45 ಗಂಟೆಗೆ ಅಂಬಲಗಾ ಕ್ರಾಸ ಕಮಾನಿನಿಂದ ಅಂಬಲಗಾ ಗ್ರಾಮಕ್ಕೆ ಹೋಗುವಾಗ ಅಪಘಾತ ಆಯಿತು ಎಂದರೆ ಸರಿ. ಆರೋಪಿ ಟಂಟಂ ಸಂಖ್ಯೆ ಕೆಎ-32/ಎ-1889 ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಚಾಸಾ-8 ರಿಂದ 13, 15 ರವರು ಸದರಿ ಗಾಡಿಯಲ್ಲಿ ಇದ್ದೇವು ಎಂದರೆ ಸರಿ. ಮಹಾಗಾಂವ ಕ್ರಾಸ ಹತ್ತಿರ ಆರೋಪಿ ವಾಹನವನ್ನು ಅತಿ ವೇಗವಾಗಿ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸುತ್ತಿದ್ದ ಕಾರಣ ಟಂಟಂ ಪಲ್ಟಿಯಾಗಿ ಆರೋಪಿ ಓಡಿ ಹೋಗಿರುತ್ತಾನೆ ಎಂದರೆ ಸರಿ. ಈ ಅಪಘಾತದಲ್ಲಿ ರತ್ನಾಬಾಯಿ ಬಾಯಿ ಹಾಗು ದಾಮು ಮೃತ ಹೊಂದಿರುತ್ತಾರೆ ಎಂದರೆ ಸರಿ. ಆದಿತ್ಯರವರಿಗೂ ಗಾಯಗಳು ಆಗಿರುತ್ತವೆ ಎಂದರೆ ಸರಿ. ಸದರಿ ಅಪಘಾತದಲ್ಲಿ ನನಗೂ ಪೆಟ್ಟಾಗಿರುತ್ತದೆ ಎಂದರ ಸರಿ. ಚಾಸಾ-13 ರವರು ನಮಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆಸ ರಿ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರ ಸರಿ. ನಾನು ಠಾಣೆಯಲ್ಲಿ ಈ ರೀತಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಎ.ಸಿ.ಟಿ ವಕೀಲರಿಂದ**

ಘಟನೆ ಆದ ದಿನದಂದೇ ಆಸ್ಪತ್ರೆಯಲ್ಲಿ ಬಂದು ನನ್ನ ಹೇಳಿಕೆ ಪಡೆದುಕೊಂಡು ಹೋಗಿರುತ್ತಾರೆ. ನಾನು ಮಹಾಗಾಂವ ಕ್ರಾಸದಿಂದ ಅಂಬಲಗಾ ಕಡೆಗೆ ಹೋಗುತ್ತಿದ್ದೇವು. ದಾವಲಮಲೀಕ ದರ್ಗಾ ವರೆಗೂ ವಾಹನ ಚೆನ್ನಾಗಿ ನಡೆಸಿಕೊಂಡು ಬಂದನು. ಅಲ್ಲಿ ಬಂದು ವಾಹನದ ಬ್ರೆಕ ಫೇಲ್ ಆಗಿದೆ ಎಂದು ಆರೋಪಿ ಹೇಳಿರುತ್ತಾನೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ದರ್ಗಾ ಹತ್ತಿರ ಇಳಿಜಾರು ಇರುತ್ತದೆ ಎಂದರೆ ಸರಿ. ದರ್ಗಾದ ನಂತರ ಒಂದು ದೊಡ್ಡ ತಿರುವು ಇದೆ ಎಂದರೆ ಸರಿ. ಘಟನೆ ನಡೆದ ಸಮಯದಲ್ಲಿ ರಸ್ತೆ ಸರಿ ಇರಲಿಲ್ಲ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಘಟನೆ ನಡೆದಿರುವುದಿಲ್ಲ ತಿರುವು ಇದ್ದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಬ್ರೇಕ ಫೇಲ ಆದ ಬಗ್ಗೆ ಹೇಳಿರುತ್ತಾನೆ ಎಂದರೆ ಸರಿ. ನಮ್ಮೊಂದಿಗೆ ಆರೋಪಿ ಪಲ್ಟಿ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿ ತಪ್ಪಿನಿಂದ ಅಲ್ಲದೇ ತಿರುವು ಇದ್ದ ಕಾರಣ ಅಪಘಾತ ಅಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಧನಕ್ಕಾಗಿ ಕಲಬುರಗಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದರ ಸರಿ. ನಮಗೆ ಇನ್ನು ಪರಿಹಾರ ಧನ ಬಂದಿರುವುದಿಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಪರಿಹಾರ ಧನಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ